## ಯಥಾರ್ಥವಾದ ನಿಶ್ಚಯದ ಅಸ್ತಿಭಾರದ (ಫೌಂಡೇಷನ್) ಮೂಲಕ ಸಂಪೂರ್ಣ ಪವಿತ್ರತೆಯನ್ನು ಧಾರಣೆ ಮಾಡಿರಿ

ಇಂದು ಬಾಪ್ದಾದಾರವರು ದೇಶ-ವಿದೇಶದ ನಾಲ್ಕೂ ಕಡೆಯ ಹೊಸ ಹೊಸ ಮಕ್ಕಳನ್ನು ನೋಡುತ್ತಿದ್ದಾರೆ. ಆ ಮಕ್ಕಳು ಮಧುಬನದಲ್ಲಿ ಸಾಕಾರ ರೂಪದಲ್ಲಿ ಬಂದಿರಬಹುದು ಅಥವಾ ಆಕಾರ ರೂಪದಲ್ಲಿ ತಮ್ಮ ತಮ್ಮ ಸೇವಾ- ಸ್ಥಾನದಲ್ಲಿ ಬಂದಿರಬಹುದು. ಇಂತಹ ಹೊಸ ಮಕ್ಕಳನ್ನು ನೋಡಿ ಬಾಪ್ದಾದಾರವರು ಎಲ್ಲರ ನಿಶ್ಚಯವನ್ನು ನೋಡುತ್ತಿದ್ದಾರೆ. ಏಕೆಂದರೆ ನಿಶ್ಚಯವು ಈ ಬ್ರಾಹ್ಮಣ ಜೀವನದ ಸಂಪನ್ನತೆಯ ಫೌಂಡೇಷನ್ನಾಗಿದೆ. ಹಾಗೂ ಫೌಂಡೇಷನ್ನು ಸುಭದ್ರವಾಗಿದ್ದರೆ ಸಹಜವಾಗಿ ಹಾಗೂ ತೀವ್ರ ಗತಿಯಿಂದ ಸಂಪೂರ್ಣತೆಯ ಹಂತವನ್ನು ತಲುಪುವುದು ನಿಶ್ಚಿತವಾಗಿದೆ. ಆದ್ದರಿಂದ ಬಾಪ್ದಾದಾರವರು ನಿಶ್ಚಯವು ಭಿನ್ನ ಭಿನ್ನ ಪ್ರಕಾರದ್ದು ಇರುವುದನ್ನು ನೋಡುತ್ತಿದ್ದಾರೆ. ಯಥಾರ್ಥವಾದ ನಿಶ್ಚಯವು ಏನಾಗಿದೆಯೆಂದರೆ ನಾನು ಪರಮಾತ್ಮ ತಂದೆಯ ಮಗುವಾಗಿ ಬಿಟ್ಟೆನೆಂದು ತಿಳಿದುಕೊಂಡು ಸ್ವಯಂ ನಿಮ್ಮನ್ನೂ ಆತ್ಮ ಸ್ವರೂಪದಲ್ಲಿ ತಿಳಿದುಕೊಳ್ಳುವುದು, ಒಪ್ಪಿಕೊಳ್ಳುವುದು, ನಡೆಯುವುದು ಹಾಗೂ ತಂದೆಯನ್ನೂ ಸಹ ಯಾರಾಗಿದ್ದಾರೋ ಹಾಗೆ ಯಥಾರ್ಥವಾಗಿ ತಿಳಿದುಕೊಳ್ಳುವುದು ಯಥಾರ್ಥ ನಿಶ್ಚಯವಾಗಿದೆ.

ಎರಡನೆಯ ಬಗೆಯ ನಿಶ್ಚಯವುಳ್ಳವರು ಯೋಗದ ಮೂಲಕ ಸ್ವಲ್ಪ ಸಮಯದವರೆಗೆ ಅಶಾಂತಿಯಿಂದ ಶಾಂತಿಯ ಅನುಭವ ಮಾಡುತ್ತಾರೆ ಹಾಗೂ ಸ್ಥಾನದ ಶಕ್ತಿಶಾಲಿ ಶಾಂತ ವಾಯುಮಂಡಲವು ಅವರನ್ನು ಆಕರ್Àಣೆ ಮಾಡುತ್ತದೆ ಅಥವಾ ಬ್ರಾಹ್ಮಣ ಪರಿವಾರ ಬಾಹ್ಮಣ ಆತ್ಮರ ಆತ್ಮಿಕ ಪ್ರೀತಿ ಹಾಗೂ ಪವಿತ್ರತೆಯ ಜೀವನದ ಪ್ರಭಾವವು ಆಗುತ್ತದೆ. ಕಂಪೆನಿ (ಸಂಗವು ಚೆನ್ನಾಗಿದೆಯೆನಿಸುತ್ತದೆ. ಪ್ರಪಂಚದ ವಾಯುಮಂಡಲದ ಹೋಲಿಕೆಯಲ್ಲಿ ಈ ಸಂಗವು ಉತ್ತಮವಾಗಿದೆಯೆನಿಸುತ್ತದೆ. ಪ್ರಪಂಚದ ವಾಯುಮಂಡಲದ ಹೋಲಿಕೆಯಲ್ಲಿ ಈ ಸಂಗವು ಚೆನ್ನಾಗಿದೆಯೆನಿಸುತ್ತದೆ. ಜ್ಞಾನವು ಉತ್ತಮವಾಗಿದೆ, ಪರಿವಾರವೂ ಉತ್ತಮವಾಗಿದೆ, ವಾಯುಮಂಡಲವೂ ಉತ್ತಮವಾಗಿದೆಯೆನಿಸುತ್ತದೆ. ಆದ್ದರಿಂದ ಹೀಗೆ ಈ ಉತ್ತಮವಾಗಿದೆ ಎನ್ನುವ (ಫೌಂಡೇÀನ್ದ ಆಧಾರದಿಂದ ನಡೆಯುತ್ತಾ ಇರುತ್ತಾರೆ. ಇವರು ಎರಡನೆಯ ದರ್ಜೆಯವರಾಗಿದ್ದಾರೆ. ಮೊದಲನೆಯ ದರ್ಜೆಯವರು ಯಥಾರ್ಥವಾದ ನಿಶ್ಚಯವುಳ್ಳವರು ಹಾಗೂ ಎರಡನೆಯ ದರ್ಜೆಯವರು ಉತ್ತಮವಾಗಿದೆಯೆನಿಸುತ್ತದೆ ಎನ್ನುವ ಆಧಾರದಿಂದ ನಡೆಯುವವರು ಹಾಗೂ ಮೂರನೆಯ ದರ್ಜೆಯವರು ಪ್ರಪಂಚದ ಸಂಬಂಧಿಗಳ ದುಃಖಮಯವಾದ ವಾತಾವರಣದಿಂದ ಪಾರಾಗಿ ಶಾಂತಿಯ ಅನುಭವ ಮಾಡುತ್ತಾರೆ. ಅವರು ಜ್ಞಾನದ ಗುಹ್ಯತೆಯಲ್ಲಿ ಹೋಗುವುದಿಲ್ಲ. ಆದರೆ ಶಾಂತಿಯ ಪ್ರಾಪ್ತಿಯಾಗುವ ಕಾರಣದಿಂದ ಒಮ್ಮೊಮ್ಮೆ ಬಂದೂ ಬರುತ್ತಾರೆ, ಒಮ್ಮೊಮ್ಮೆ ಬರುವುದೂ ಇಲ್ಲ. ಆದರೆ ಯಥಾರ್ಥವಾದ ನಿಶ್ಚಯ ಬುದ್ಧಿಯುಳ್ಳವರು ವಿಜಯಶಾಲಿ ಆಗುತ್ತಾರೆ. ಹಾಗೂ ಏನು ನೋಡಲಾಗುತ್ತದೆಯೆಂದರೆ ಮೊದಲು ಮೊದಲು ಬಂದಾಗ ಅಶಾಂತಿಯಿಂದ ಬೇಸರವಾಗಿರುತ್ತಾರೆ ಹಾಗೂ ಶಾಂತಿಯ ಇಚ್ಛೆಯುಳ್ಳವರಾಗಿರುತ್ತಾರೆ. ಆದ್ದರಿಂದ ಹೇಗೆ ಬಾಯಾರಿರುವವರು ಒಂದು ತೊಟ್ಟು ನೀರು ಸಿಕ್ಕಿಬಿಟ್ಟರೆ ಅವರು ಅದನ್ನು ಬಹಳ ದೊಡ್ಡ ಪ್ರಾಪ್ತಿಯೆಂದು ಅನುಭವ ಮಾಡುತ್ತಾರೆ. ಹೀಗೆ ಅಪ್ರಾಪ್ತಿಯಿಂದ ಪ್ರಾಪ್ತಿಯಾಗುತ್ತದೆ. ಪರಿವಾರದಲ್ಲಿ, ಜ್ಞಾನದಲ್ಲಿ, ಯೋಗದಲ್ಲಿ, ವಾಯುಮಂಡಲದಲ್ಲಿ ಅಂತರವು ಕಂಡುಬರುತ್ತದೆ. ಆದ್ದರಿಂದ ಮೊದಲಿನ ಸಮಯದಲ್ಲಿ ತುಂಬಾ ಅಕ್ಕರೆ ಉತ್ಸಾಹದಿಂದ ನಡೆಯುತ್ತಾರೆ. ತುಂಬಾ ನಶೆಯಿರುತ್ತದೆ. ಖುಷಿಯೂ ಇರುತ್ತದೆ. ಆದರೆ ನಡೆಯುತ್ತಾ ನಡೆಯುತ್ತಾ ಒಂದುವೇಳೆ ಎರಡನೆಯ ದರ್ಜೆಯ ಅಥವಾ ಮೂರನೆಯ ದರ್ಜೆಯ ನಿಶ್ಚಯವಿದ್ದರೆ, ಮೊದಲನೆಯ ದರ್ಜೆಯ ಯಥಾರ್ಥ ನಿಶ್ಚಯದ ಪಕ್ಕಾ ಫೌಂಡೇಷನ್ನಿಲ್ಲದಿದ್ದರೆ ಕ್ರಮೇಣವಾಗಿ ಏನು ಪ್ರಾರಂಭದ ಖುಷಿ, ಪ್ರಾರಂಭದ ಆದೇಶವಿತ್ತೋ ಅದು ವ್ಯತ್ಯಾಸದಲ್ಲಿ ಬಂದುಬಿಡುತ್ತದೆ.

ಈ ಸೀಜನ್ನಿನಲ್ಲಿ ಹೊಸಹೊಸಬರು ಅನೇಕರು ಬಂದಿದ್ದಾರೆ. ಹಾಗೂ ಅವಕಾಶವೂ ದೊರೆತಿರುವುದು ತುಂಬಾ ಒಳ್ಳೆಯದು. ಬಾಪ್ದಾದಾರವರಿಗೂ ಸಹ ಹೊಸ ಹೊಸ ಮಕ್ಕಳನ್ನು ನೋಡಿ ಏನು ಖುಷಿಯಾಗುತ್ತದೆಯೆಂದರೆ ಇವರು ಪುನಃ ತಮ್ಮ ಪರಿವಾರದಲ್ಲಿ ಬಂದು ಬಿಟ್ಟಿದ್ದಾರೆ ಎಂದು. ಆದರೆ ಏನು ಪರಿಶೀಲನೆ ಮಾಡಿಕೊಳ್ಳಿರೆಂದರೆ ನಿಶ್ಚಯದ ಫೌಂಡೇಷನ್ನು ಪಕ್ಕಾ ಆಗಿದೆಯೇ ಎಂಬುದನ್ನು, ಏಕೆಂದರೆ ಯಾರಿಗೆ ನಿಶ್ಚಯವಿದೆಯೋ ನನ್ನ ನಿಶ್ಚಯವು ನಂಬರ್ಒನ್ ಆಗಿದೆ ಅಥವಾ ನಂಬರ್ ಟೂ ಆಗಿದೆ ಎಂದು ಅದರ ಚಿಹ್ನೆಗಳನ್ನು ಪರಿಶೀಲನೆ ಮಾಡಿಕೊಳ್ಳಿರಿ. ಒಂದುವೇಳೆ ನಂಬರ್ ಒನ್ ನಿಶ್ಚಯವಿದ್ದರೆ, ನಡೆಯುತ್ತಾ ನಡೆಯುತ್ತಾ ಮುಖ್ಯವಾಗಿ ಪವಿತ್ರತೆಯ ಧಾರಣೆಯಲ್ಲಿರಿ ಕಷ್ಟವಾಗುವುದಿಲ್ಲ. ಒಂದುವೇಳೆ ಪವಿತ್ರತೆಯು ಸ್ವಪ್ನಮಾತ್ರವಾದರೂ ಅಸ್ಥಿರವಾದರೆ, ಏರುಪೇರಿನಲ್ಲಿ ಬಂದರೆ ನಂಬರ್ಒನ್ ಫೌಂಡೇಷನ್ ಕಚ್ಚಾ ಆಗಿದೆಯೆಂದು ತಿಳಿದುಕೊಳ್ಳಿರಿ. ಏಕೆಂದರೆ ಆತ್ಮದ ಸ್ವಧರ್ಮವು ಪವಿತ್ರತೆಯಾಗಿದೆ. ಅಪವಿತ್ರತೆಯು ಪರಧರ್ಮವಾಗಿದೆ ಹಾಗೂ ಪವಿತ್ರತೆಯು ಸ್ವಧರ್ಮವಾಗಿದೆ. ಆದ್ದರಿಂದ ಯಾವಾಗ ಸ್ವಧರ್ಮದ ನಿಶ್ಚಯವಾಗಿಬಿಟ್ಟಿತೋ ಆಗ ಪರಧರ್ಮವು ಅಲುಗಾಡಿಸಲೂ ಸಾಧ್ಯವಾಗುವುದಿಲ್ಲ ಅನೇಕ ಮಕ್ಕಳು ಏನು ಹೇಳುತ್ತಾರೆಂದರೆ ಮೊದಲಂತೂ ತುಂಬಾ ಚೆನ್ನಾಗಿ ಬರುತ್ತಿದ್ದರು, ಈಗ ಏನಾಗಿಬಿಟ್ಟಿದೆಯೋ ಗೊತ್ತಿಲ್ಲ ಎಂದು. ವಾಸ್ತವವಾಗಿ

ಏನಾಗಿಬಿಡುತ್ತದೆಯೆಂದರೆ, ತಂದೆಯು ಯಾರಾಗಿದ್ದಾರೋ ಎಂತಹವರಾಗಿದ್ದಾರೋ ಅನುಭವದಲ್ಲಿ ಹಾಗೆ ತಂದುಕೊಳ್ಳುವುದಿಲ್ಲ. ಒಂದುವೇಳೆ ತಂದೆಯು ಜೊತೆಯಲ್ಲಿದ್ದಾರೆಯೇ ಎಂದು ಕೇಳಿದರೆ, ಎಲ್ಲರೂ ಕೈ ಎತ್ತುವರು. (ಬಾಪ್ದಾದಾರವರು ಎಲ್ಲರಿಂದ ಕೈ ಎತ್ತಿಸಿದರು) ಕೈ ಏನೋ ಎತ್ತಿಬಿಟ್ಟಿರಿ ಹಾಗೂ ಕೈ ಎತ್ತುವುದಂತೂ ತುಂಬಾ ಸಹಜ ಆಗಿದೆ. ಆದರೆ ತಂದೆಯು ಜೊತೆಯಲ್ಲಿದ್ದರೆ, ತಂದೆಯ ಮೊಟ್ಟಮೊದಲಿನ ಮಹಿಮೆಯನ್ನು ಏನು ಮಾಡುತ್ತೀರಿ. ತಂದೆಯು ಯಾರಾಗಿದ್ದಾರೆ? ಸರ್ವಶಕ್ತಿವಂತ ಆಗಿದ್ದಾರೆ. ಇದನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಕೇವಲ ಹಾಗೆಂದು ತಿಳಿದುಕೊಂಡಿದ್ದೀರೋ? ಒಪ್ಪಿಕೊಳ್ಳುತ್ತೀರಾ? ಹಾಗಾದರೆ ಯಾವಾಗ ಸರ್ವಶಕ್ತಿವಂತ ತಂದೆಯು ಜೊತೆಯಲ್ಲಿದ್ದಾರೋ ಆಗ ಸರ್ವಶಕ್ತಿವಂತನ ಮುಂದೆ ಅಪವಿತ್ರತೆಯು ಬರಲು ಸಾಧ್ಯವಿದೆಯೇ? ಬರುವುದು ಸಾಧ್ಯವಿಲ್ಲ. ಆದರೆ ಬರುವುದೇನೋ ಬರುತ್ತದೆ. ಹಾಗಾದರೆ ಎಲ್ಲಿಂದ ಬರುತ್ತದೆ? ಅನ್ಯ ಯಾವ ಸ್ಥಳವಾದರೂ ಇದೆಯೇನು? ಕಳ್ಳರು ತಮ್ಮ (ಸ್ಪೆಷಲ್) (ವಿಶೇಷ) ಗೇಟನ್ನು ರಚನೆ ಮಾಡಿಕೊಂಡು ಬಿಡುತ್ತಾರೆ. ಕಳ್ಳಗೇಟ್ ಇರುತ್ತದೆ. ಹಾಗೆಯೇ ನಿಮ್ಮ ಬಳಿ ಮರೆಮಾಡಿರುವ ಕಳ್ಳಗೇಟ್ ಯಾವುದೂ ಇಲ್ಲ ತಾನೇ? ಪರಿಶೀಲನೆ ಮಾಡಿಕೊಳ್ಳಿರಿ. ಇಲ್ಲದಿದ್ದರೆ ಮಾಯೆಯು ಎಲ್ಲಿಂದ ಬಂದಿತು? ಮೇಲಿಂದ ಬಂದುಬಿಟ್ಟಿತೇನು? ಒಂದುವೇಳೆ ಮೇಲಿನಿಂದಲೇ ಬಂದುಬಿಟ್ಟರೂ ಮೇಲೆಯೇ ವಿನಾಶವಾಗಿ ಬಿಡಬೇಕು, ಯಾವುದೋ ಮರೆಯಲ್ಲಿರುವ ಗೇಟ್ನಿಂದ ಬರುವುದರಿಂದ ನಿಮಗೆ ಗೊತ್ತಾಗುವುದಿಲ್ಲ ಆದ್ದರಿಂದ ಮಾಯೆಯು ಯಾವುದಾದರೂ ಕಳ್ಳಗೇಟನ್ನು ರಚನೆ ಮಾಡಿ ಇಟ್ಟಿಲ್ಲವೇ ಎಂಬುದನ್ನು ಪರಿಶೀಲನೆ ಮಾಡಿರಿ ಹಾಗೂ ಅದು ಕಳ್ಳಗೇಟನ್ನು ರಚನೆ ಮಾಡುತ್ತದೆ ಎನ್ನುವುದು ಗೊತ್ತಿದೆಯೇ? ನಿಮ್ಮ ಯಾವ ವಿಶೇಷ ಸ್ವಭಾವ ಅಥವಾ ಸಂಸ್ಕಾರವು ದುರ್ಬಲವಾದುದು ಇದೆಯೋ ಅದನ್ನೇ ಮಾಯೆಯು ತನ್ನ ಗೇಟನ್ನಾಗಿ ಮಾಡಿಕೊಂಡು ಬಿಡುತ್ತದೆ. ಏಕೆಂದರೆ ಯಾವಾಗ ಯಾವುದಾದರೂ ಸ್ವಭಾವ ಅಥವಾ ಸಂಸ್ಕಾರವು ದುರ್ಬಲವಾದುದು ಇದೆಯೋ ಆಗ ನೀವು ಎಷ್ಟೇ ಬಾಗಿಲನ್ನು ಮುಚ್ಚಿದರೂ ದುರ್ಬಲ ಗೇಟ್ ಆಗಿರುವುದರಿಂದ ಮಾಯೆಯು ತಿಳಿದುಕೊಂಡು ಬಿಡುತ್ತದೆ. ಏಕೆಂದರೆ ಮಾಯೆಯು ಜಾನೀ ಜಾನನಹಾರ್ (ಸರ್ವಜ್ಞ) ಆಗಿದೆ ದುರ್ಬಲವಾಗಿದೆ ಇದರಿಂದ ಮಾರ್ಗವು ದೊರೆಯಬಹುದು ಎನ್ನುವುದ ಅದಕ್ಕೆ ಗೊತ್ತಾಗಿ ಬಿಡುತ್ತದೆ. ಹಾಗೂ ಮಾರ್ಗವು ಸಿಕ್ಕಿಯೂ ಸಿಗುತ್ತದೆ. ನಡೆಯುತ್ತಾ ನಡೆಯುತ್ತಾ ಅಪವಿತ್ರತೆಯ ಸಂಕಲ್ಪಗಳೂ ಬರುತ್ತವೆ. ಅಪವಿತ್ರ ನುಡಿಯೂ ಹೊರಬರುತ್ತದೆ. ಕರ್ಮವೂ ಅಪವಿತ್ರವಾದುದು ಆಗಿಬಿಡುತ್ತದೆ, ಆದ್ದರಿಂದ ತೆರೆದಿರುವ ಗೇಟ್ ಇದೆಯಲ್ಲವೇ. ಆದ್ದರಿಂದಲೇ ಮಾಯೆಯು ಬಂದಿತು. ಆದ್ದರಿಂದ ತಂದೆಯು ಹೇಗೆ ಜೊತೆಯಲ್ಲಿ ಇದ್ದಂತಾಯಿತು? ಹೇಳುವುದೇನೋ ಸರ್ವಶಕ್ತಿವಂತನು ಜೊತೆಯಲ್ಲಿ ಇದ್ದಾರೆ ಎಂದು ಹೇಳುತ್ತೀರಿ. ಹಾಗಾದರೆ ಈ ದೌರ್ಬಲ್ಯವು ಎಲ್ಲಿಂದ ಬಂದಿತು? ದೌರ್ಬಲ್ಯವು ಉಳಿಯುವುದು ಸಾಧ್ಯವಿದೆಯೇ? ಸಾಧ್ಯವಿಲ್ಲ ತಾನೇ. ಹಾಗಾದರೆ ಉಳಿದು ಬಿಡುತ್ತದೆ. ಪವಿತ್ರತೆಯಲ್ಲಿ ಯಾವುದಾದರೂ ವಿಕಾರವು ಉಳಿದಿರಬಹುದು. ಒಂದುವೇಳೆ ಲೋಭವಿದ್ದರೆ, ಲೋಭವು ಕೇವಲ ಆಹಾರ ಪಾನೀಯದ್ದು ಇರುವುದಿಲ್ಲ. ನನ್ನಲ್ಲಿ ಊಟ ತಿಂಡಿ, ಅಥವಾ ವಸ್ತ್ರಾಭರಣದ ಅಥವಾ ವೈಭವದಿಂದಿರುವ ಯಾವ ಆಕರ್ಷಣೆಯೂ ಇಲ್ಲವೆಂದು ಅನೇಕರು ತಿಳಿದುಕೊ0ಡಿದ್ದಾರೆ. ಏನು ದೊರೆಯುತ್ತದೆಯೋ, ಏನು ತಯಾರಾಗುತ್ತದೆಯೋ ಅದರಲ್ಲಿ ತೃಪ್ತನಾಗಿರುತ್ತೇನೆಂದು ಹೇಳುತ್ತಾರೆ. ಆದರೆ ಹೇಗೆ ಮುನ್ನಡೆಯುತ್ತಾರೋ ಆಗ ಮಾಯೆಯು ಲೋಭವನ್ನೂ ರಾಯಲ್ ಹಾಗೂ ಸೂಕ್ಷ್ಮ ರೂಪದಲ್ಲಿ ತಂದಿಡುತ್ತದೆ. ಆ ರಾಯಲ್ ರೂಪವು ಏನಾಗಿದೆ? ವಿದ್ಯಾರ್ಥಿಯಾಗಿರಲಿ, ಶಿಕ್ಷಕಿಯಾಗಿರಲಿ, ಇಬ್ಬರಲ್ಲಿಯೂ ರಾಯಲ್ ಲೋಭವನ್ನು ಮಾಯೆಯು ತಂದಿಡಲು ಪೂರ್ಣ ಪುರುಷಾರ್ಥ ಮಾಡುತ್ತದೆ. ಒಂದುವೇಳೆ ವಿದ್ಯಾರ್ಥಿಯಾಗಿರುವವರು ತುಂಬಾ ಒಳ್ಳೆಯ ನಿಶ್ಚಯ ಬುದ್ಧಿಯವರಾಗಿದ್ದರೆ, ಸೇವಾಧಾರಿಯಾಗಿದ್ದರೆ, ಎಲ್ಲದರಲ್ಲಿಯೂ ಚೆನ್ನಾಗಿದ್ದರೆ, ಅವರು ಮುನ್ನಡೆದಾಗ ಈ ರಾಯಲ್ ಲೋಭವು ಬರುತ್ತದೆ. ಇಷ್ಟೆಲ್ಲಾ ಮಾಡುತ್ತೇನೆ, ಎಲ್ಲ ರೂಪದಿಂದಲೂ ಸಹಾಯಕನಾಗಿದ್ದೇನೆ. ತನುವಿನಿಂದ, ಮನಸ್ಸಿನಿಂದ, ಧನದಿಂದ ಹಾಗೂ ಯಾವ ಸಮಯದಲ್ಲಿ ಬೇಕೋ ಆ ಸಮಯದಲ್ಲಿ ಸೇವೆಯಲ್ಲಿ ಹಾಜರಾಗಿ ಬಿಡುತ್ತೇನೆ. ಆದರೂ ಸಹ ನನ್ನ ಹೆಸರನ್ನು ಶಿಕ್ಷಕಿಯು ವರ್ಣನೆ ಮಾಡುವುದಿಲ್ಲ. ಈ ಜಿಜ್ಞಾಸುವು ತುಂಬಾ ಉತ್ತಮರಾಗಿದ್ದಾರೆ ಎಂದು ಹೇಳುವುದಿಲ್ಲ ಎಂದು ಭಾವಿಸುತ್ತಾರೆ. ಒಂದುವೇಳೆ ಈ ಸಂಕಲ್ಪವು ಬರದಿದ್ದರೂ ಇನ್ನೊಂದು ರೂಪದಲ್ಲಿ ಬರುತ್ತದೆ. ಒಂದುವೇಳೆ ಶಿಕ್ಷಕಿಯು ಪ್ರಶಂಸೆ ಮಾಡಿಬಿಟ್ಟರೆ ತನ್ನ ಹೆಸರನ್ನು ಕೇಳುತ್ತಾ ಕೇಳುತ್ತಾ ನಾನೇ ಉತ್ತಮ ಜಿಜ್ಞಾಸು ಆಗಿದ್ದೇನೆ, ನಾನೇ ಸೇವೆ ಮಾಡುತ್ತೇನೆ. ನಾನೇ ಇದನ್ನೆಲ್ಲಾ ಮಾಡಬಲ್ಲೆನು ಎನ್ನುವ ಅಭಿಮಾನದ ರೂಪದಲ್ಲಿ ಬಂದು ಬಿಡುತ್ತದೆ ಅಥವಾ ತುಂಬಾ ಕೆಲಸಕಾರ್ಯ ಮಾಡಿಬಂದರೆ, ಯಾರೂ ಅವರನ್ನು ವಿಚಾರಿಸದಿದ್ದರೆ, ಒಂದು ಲೋಟ ನೀರನ್ನೂ ಕೊಡದಿದ್ದರೆ, ಇವರಿಗೆ ಗಮನವನ್ನೇ ಕೊಡದಿದ್ದರೆ, ತಮ್ಮ ಕೆಲಸದಲ್ಲಿ ವ್ಯಸ್ತರಾಗಿದ್ದರೆ ಹೀಗೆ ಕೆಲಸ ಮಾಡಿ ಬಂದರೂ ಯಾರೂ ಕೇಳದಿದ್ದರೆ, ಸೇವೆ ಮಾಡುವುದು ಅಥವಾ ಮಾಡದಿರುವುದು ಒಂದೇ ಸಮಾನ ಆಗಿಬಿಡುತ್ತದೆ. ಇಲ್ಲಿ ಕೇಳುವವರು ಯಾರೂ ಇಲ್ಲ. ಇದಕ್ಕಿಂತಲೂ ಮನೆಯಲ್ಲಿ ನೆಮ್ಮದಿಯಿಂದ ಇರುವುದು ಒಳ್ಳೆಯದು ಎಂದು ತಿಳಿದುಕೊಳ್ಳುತ್ತಾರೆ. ಯಾವಾಗ ಸೇವೆ ಇರುತ್ತದೆಯೋ ಆಗ ಸೇವೆ ಮಾಡುವೆನು ಎಂದು ವಿಚಾರವು ಬರುತ್ತದೆ. ಹೀಗೆ ಈ ಭಿನ್ನ ಭಿನ್ನ ಪ್ರಕಾರದ ವಿಕಾರಗಳ ರಾಯಲ್ ರೂಪವು ಬರುತ್ತದೆ. ಹಾಗೂ ಒಂದು ವಿಕಾರವು ಬಂದುಬಿಟ್ಟರೆ - ಲೋಭ ಬರದಿದ್ದರೆ ಅಭಿಮಾನವು ಬಂದು ಬಿಡಬಹುದು ಅಥವಾ ತನಗೆ ಮಾನ್ಯತೆಯು ದೊರೆಯಬೇಕು ಎನ್ನುವ ವಿಚಾರವು ಬಂದು ಬಿಡಬಹುದು. ಆಗ ಎಲ್ಲಿ ಒಂದು ವಿಕಾರವು ಬರುತ್ತದೆಯೋ ಅಲ್ಲಿ ಅದರ ನಾಲ್ಕೂ ಸಾಥಿಗಳು ಅಡಗಿಕೊಂಡಿರುವ ರೂಪದಲ್ಲಿ ಇರುತ್ತವೆ. ಹಾಗೂ ಒಂದು ವಿಕಾರಕ್ಕೆ ನೀವು ಅವಕಾಶ ನೀಡಿದರೆ, ವಿಕಾರಗಳು ಅಡಗಿಕೊ0ಡಿವೆಯೋ ಅವು ಸಹ ಸಮಯಾನುಸಾರವಾಗಿ ತಮ್ಮ ಅವಕಾಶವನ್ನು ತೆಗೆದುಕೊಳ್ಳುತ್ತಾ ಇರುತ್ತವೆ. ಆಮೇಲೆ ಏನು ಹೇಳುತ್ತಾರೆಂದರೆ ಮೊದಲಿನ ಸಮಾನ ನಶೆಯು ಈಗ ಇಲ್ಲ ಎಂದು ಮೊದಲು ತುಂಬಾ ಉತ್ತಮವಾದ ನಡೆಯಿತ್ತು. ಮೊದಲಿನ ಅವಸ್ಥೆಯು ತುಂಬಾ ಉತ್ತಮವಾಗಿತ್ತು. ಈಗ ಏನಾಗಿಬಿಟ್ಟಿದೆಯೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಏನಾಗಿಬಿಟ್ಟಿತೋ ಗೊತ್ತಿಲ್ಲವೇ?

ಮಾಯೆಯು ಕಳ್ಳಗೇಟಿನ ಮೂಲಕ ಬಂದು ಬಿಟ್ಟಿತು - ಇದು ವಾಸ್ತವಿಕ ಸಂಗತಿಯಾಗಿದೆ, ಗೊತ್ತಿಲ್ಲವೆಂದು ಹೇಳಬೇಡಿರಿ.

ಹಾಗೂ ಶಿಕ್ಷಕಿಯರಿಗೂ ಮಾಯೆಯು ಬರುತ್ತದೆ. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವೇ ಬರುವುದಿಲ್ಲ. ಶಿಕ್ಷಕಿಯರಿಗೆ ಏನು ಬೇಕು? ಸೇವಾಕೇಂದ್ರವು ಚೆನ್ನಾಗಿರಬೇಕು, ಬಟ್ಟೆಗಳು ಹೇಗಿದ್ದರೂ ಪರವಾಗಿಲ್ಲ. ಆದರೆ ಸೇವಾಕೇಂದ್ರವು ಸ್ವಲ್ಪ ಇರಲು ಯೋಗ್ಯವಾಗಿ ಚೆನ್ನಾಗಿರಬೇಕು ಹಾಗೂ ಯಾರು ಸಾಥಿ ಇರುತ್ತಾರೋ ಅವರು ಒಳ್ಳೆಯವರಾಗಿರಬೇಕು. ವಿದ್ಯಾರ್ಥಿಗಳು ಉತ್ತಮರಾಗಿರಬೇಕು. ಬಾಬಾರವರ ಭಂಡಾರವು ಉತ್ತಮವಾಗಿರಬೇಕು. ಒಂದುವೇಳೆ ಉತ್ತಮ ವಿದ್ಯಾರ್ಥಿಯು ಎಲ್ಲಿಯಾದರೂ ವರ್ಗವಾಗಿ ಹೋದರೆ ಎದೆಯು ಸ್ವಲ್ಪ ಡವಗುಟ್ಟುತ್ತದೆ. ಆಮೇಲೆ ಏನು ಮಾಡುವುದು, ಇವರು ಸಹಾಯಕರಾಗಿದ್ದರಲ್ಲವೇ. ಈಗ ಅವರು ಹೋಗಿಬಿಟ್ಟರು ಎಂದು ಯೋಚಿಸುತ್ತಾರೆ. ಸಹಾಯಕರು ಜಿಜ್ಞಾಸುಗಳೋ ಅಥವಾ ತಂದೆಯು ಆಗಿದ್ದಾರೋ? ಆ ಸಮಯದಲ್ಲಿ ಯಾರು ಬುದ್ಧಿಯಲ್ಲಿ ಬರುತ್ತಾರೆ? ಜಿಜ್ಞಾಸುವೋ ಅಥವಾ ತಂದೆಯೋ? ಹೀಗೆ ರಾಯಲ್ ಮಾಯೆಯು ನಿಶ್ಚಯದ ಫೌಂಡೇಷನ್ನನ್ನು ಅಲುಗಾಡಿಸಲು ಪ್ರಯತ್ನ ಮಾಡುತ್ತದೆ. ಒಂದುವೇಳೆ ಸರ್ವಶಕ್ತಿವಂತ ತಂದೆಯು ಜೊತೆಯಲ್ಲಿ ಇದ್ದಾರೆ ಎನ್ನುವ ನಿಶ್ಚಯವು ನಿಮಗೆ ಇದ್ದರೆ ತಂದೆಯು ಯಾರನ್ನಾದರೂ ನಿಮಿತ್ತ ಮಾಡಿಯೇ ಮಾಡುತ್ತಾರೆ. ಅವಕಾಶವು ದೊರೆಯಬೇಕು ಎನ್ನುವ ಇಚ್ಛೆಯನ್ನು ಇಟ್ಟುಕೊಳ್ಳಬೇಡಿರಿ. ಕನಿಷ್ಟಪಕ್ಷ ಒಂದು ಸಲ ಅಬೂವಿನ ಕನ್ಫರೆನ್ಸ್ನಲ್ಲಿ ಅಥವಾ ದೊಡ್ಡ ಸಮ್ಮೇಳನದಲ್ಲಿ ಅವಕಾಶ ಸಿಗಲಿ, ಇನ್ನೇನೂ ಇಲ್ಲದಿದ್ದರೂ ಯೋಗ ಶಿಬಿರವನ್ನಾದರೂ ಮಾಡಿಸಬೇಕು, ಈ ಅವಕಾಶವೂ ದೊರೆಯಬೇಕಲ್ಲವೇ. ಭಾಷಣ ಮಾಡದಿದ್ದರೂ ಸ್ಟೇಜಿನ (ವೇದಿಕೆಯ) ಮೇಲೆಯಾದರೂ ಬರಬೇಕು. ಕೊನೆಯಲ್ಲಿ ವಿನಾಶವಾಗಿ ಬಿಡುವುದು. ವಿನಾಶದವರೆಗೂ ನನಗೆ ಅವಕಾಶವು ಸಿಗುವುದಿಲ್ಲವೇ. ಅವಕಾಶವಂತೂ ದೊರೆಯಬೇಕಲ್ಲವೇ. ನನ್ನ ಸರದಿಯು ಬರಬೇಕಲ್ಲವೇ. ಆದರೆ ಮುಂಚೆಯೂ ಸಹ ಬಾಪ್ದಾದಾರವರು ಏನು ತಿಳಿಸಿಕೊಟ್ಟಿದ್ದಾರೆ? – ಒಂದುವೇಳೇ ಸ್ಟೇಜ್ ಮೇಲೆ ನಿಮ್ಮ ಸರದಿಯು ಬ0ದುಬಿಟ್ಟರೆ, ಯೋಗ್ಯರಾಗಿದ್ದರೆ, ಅವಕಾಶವು ದೊರೆತರೆ ಖುಷಿಯಿಂದ ನಿಮ್ಮ ಪಾತ್ರವನ್ನು ನಿರ್ವಹಿಸಿರಿ. ಆದರೆ ಈ ಸಂಕಲ್ಪವನ್ನು ಮಾಡುವುದೂ ಸಹ ಬೇಡುವುದಾಗಿದೆ. ಬೇಕು ಬೇಕು ಎನ್ನುವುದು ರಾಯಲ್ ಬೇಡಿಕೆಯಾಗಿದೆ. ವಿದ್ಯಾರ್ಥಿಯೇ ಆಗಿರಲಿ, ಶಿಕ್ಷಕಿಯೇ ಆಗಿರಲಿ ಇದು ಆಗಬೇಕು ಎನ್ನುವುದು ನಮ್ಮ ಪರಿಚಯವಲ್ಲ. ಏನು ಫೈನಲ್ ನಂಬರ್ (ಅಂತಿಮ ಸ್ಥಾನವು) ದೊರೆಯುತ್ತದೆಯೋ ಅದು ಇವರು ಎಷ್ಟು ಭಾಷಣ ಮಾಡಿದರು ಅಥವಾ ಇವರು ಎಷ್ಟು ವಿದ್ಯಾರ್ಥಿಗಳನ್ನು ರಚನೆ ಮಾಡಿದ್ದಾರೆ, ಸೇವಾಕೇಂದ್ರಗಳನ್ನು ತಯಾರು ಮಾಡಿದ್ದಾರೆ ಎನ್ನುವುದನ್ನು ಅವಲಂಬಿಸುವುದಿಲ್ಲ. ಆದರೆ ಎಷ್ಟು ಆತ್ಮರನ್ನು ಯೋಗ್ಯರನ್ನಾಗಿ ಮಾಡಿದ್ದಾರೆ. 30 ಸೇವಾಕೇಂದ್ರಗಳ ಇನ್ಚಾರ್ಜ್ (ಮೇಲ್ವಿಚಾರಕರು) ಆಗಿದ್ದಾರೆ ಎಂದು ಹೆಸರುವಾಸಿಯಾಗಿ ಬಿಡುತ್ತಾರೆ. ಸೇವಾ ಕೇಂದ್ರವನ್ನು ಸ್ಥಾಪನೆ ಮಾಡುವುದು ದೊಡ್ಡ ಸಂಗತಿಯಲ್ಲ. ಆದರೆ ಎಷ್ಟು ಆತ್ಮರನ್ನು ಯೋಗ್ಯರನ್ನಾಗಿ ಮಾಡಿದ್ದಾರೆ ಎನ್ನುವುದು ಮುಖ್ಯವಾಗಿದೆ. 30 ಸೇವಾಕೇಂದ್ರಗಳ ಮೇಲ್ವಿಚಾರಕರಾಗಿದ್ದಾರೆಂದು ಹೆಸರು ಬಂದುಬಿಟ್ಟಿತು, ಆದರೆ 30ರಲ್ಲಿ 15 ಸೇವಾಕೇಂದ್ರಗಳು ಅಲುಗಾಡುತ್ತಾ ಇದ್ದರೆ 15 ಸೇವಾಕೇಂದ್ರಗಳು ಸರಿಯಾಗಿದ್ದರೆ ಏನಾಯಿತು? ಲಾಭವಾಯಿತೋ ಅಥವಾ ಕೇವಲ ಹೆಸರು ಬಂದಿತೋ? ಇಂತಹವರು 30 ಸೇವಾಕೇಂದ್ರಗಳನ್ನು ತೆರೆದಿದ್ದಾರೆಂದು ಕೇವಲ ಹೆಸರು ಪ್ರಖ್ಯಾತವಾಗುತ್ತದೆ. ಆದರೆ ಇದರಿಂದ ಸ್ಥಾನವು ಸಿಗುವುದಿಲ್ಲ. ಅಂತಿಮ ಸ್ಥಾನವು ಎಷ್ಟು ಆತ್ಮರಿಗೆ ಸುಖವನ್ನು ಕೊಟ್ಟಿರಿ, ಎಷ್ಟು ಸ್ವಯಂ ಶಕ್ತಿಶಾಲಿಯಾಗಿದ್ದಿರಿ ಎನ್ನುವುದರ ಮೇಲೆ ದೊರೆಯುತ್ತದೆ. ಆದ್ದರಿಂದ ಈ ಬೇಕು ಬೇಕು ಎನ್ನುವುದನ್ನೂ ಸಮಾಪ್ತಿ ಮಾಡಿಬಿಡಿ. ಇಲ್ಲದಿದ್ದರೆ ಯೋಗವು ಆಗುವುದಿಲ್ಲ. ಪ್ರತಿದಿನವೂ ಇಂತಹ ಸ್ಥಳದಲ್ಲಿ ಕಾರ್ಯಕ್ರಮವು ಆಯಿತು. ಆದರೂ ನನ್ನನ್ನು ಕರೆಯಲಿಲ್ಲ, ನಿನ್ನೆ ಅಲ್ಲಿ ಆಯಿತು. ಮೊನ್ನೆ ಅಲ್ಲಿ ಆಯಿತು. ಆದರೂ ನನ್ನನ್ನು ಕರೆಯಲಿಲ್ಲ. ನಿನ್ನೆ ಅಲ್ಲಿ ಆಯಿತು, ಮೊನ್ನೆ ಅಲ್ಲಿ ಆಯಿತು ಎಂದು ಯೋಚಿಸುತ್ತಾ ಇದ್ದರೆ ಯೋಗವು ಆಗುತ್ತದೆಯೋ ಅಥವಾ ಎಣಿಕೆಯು ಆಗುತ್ತಾ ಇರುತ್ತದೆಯೋ?

ಮುಖ್ಯವಾದ ಅವಶ್ಯಕತೆ ಯಥಾರ್ಥವಾದ ನಿಶ್ಚಯವೇನಿದೆಯೋ ಅದನ್ನು ಪಕ್ಕಾ ಮಾಡಿಕೊಳ್ಳಿರಿ. ಹೇಳುವುದೇನೋ ನಾನು ಆತ್ಮನಾಗಿದ್ದೇನೆ, ಹಾಗೂ ತಂದೆಯು ಸರ್ವಶಕ್ತಿವಂತ ಆಗಿದ್ದಾರೆ ಎಂದು ಹೇಳಿಬಿಡುತ್ತೀರಿ. ಆದರೆ ಇದು ನಿತ್ಯ ಜೀವನದಲ್ಲಿ ಕರ್ಮದಲ್ಲಿ ಬರಬೇಕು. ತಂದೆಯು ಸರ್ವಶಕ್ತಿವಂತರಾಗಿದ್ದಾರೆ. ಆದರೆ ನನ್ನನ್ನು ಮಾಯೆಯು ಅಲುಗಾಡಿಸುತ್ತಾ ಇದ್ದರೆ, ನನ್ನ ತಂದೆಯು ಸರ್ವಶಕ್ತಿವಂತರಾಗಿದ್ದಾರೆಂದು ಹೇಳಿದರೆ ಯಾರು ನಂಬುತ್ತಾರೆ? ಏಕೆಂದರೆ ಹೀಗೆ ಬಾಪ್ದಾದಾರವರು ಇಂದು ವಿಶ್ವದ ಫೌಂಡೇಷನ್ನನ್ನು ನೋಡುತ್ತಾ ಇದ್ದಾರೆ.

ಹೊಸಬರಾಗಿರಲಿ, ಹಳಬರಾಗಿರಲಿ, ಈ ನಿಶ್ಚಯದ ಫೌಂಡೇಷನ್ನನ್ನು ನಿತ್ಯ ಜೀವನದಲ್ಲಿ ಉಪಯೋಗಿಸಿಕೊಳ್ಳಿರಿ ಹಾಗೂ ಅವಶ್ಯಕತೆಯ ಸಮಯದಲ್ಲಿ ಉಪಯೋಗಿಸಿಕೊಳ್ಳಿರಿ. ಸಮಯವು ಕಳೆದುಹೋದ ಮೇಲೆ ತಂದೆಯ ಮುಂದೆ ಪಶ್ಚಾತ್ತಾಪ ರೂಪದಲ್ಲಿ ಏನು ಮಾಡಲಿ ಬಾಬಾ, ಆಗಿಬಿಟ್ಟಿತು, ನೀವಂತೂ ದಯಾಹೃದಯರಾಗಿದ್ದೀರಿ, ದಯೆ ಮಾಡಿಬಿಡಿ ಎಂದು ಹೇಳಿದರೆ ಇದು ಏನಾಯಿತು? ಇದೂ ಸಹ ರಾಯಲ್ ಪಶ್ಚಾತ್ತಾಪ ಆಗಿದೆ. ತಂದೆಯು ಜೊತೆಯಲ್ಲಿದ್ದರೆ ಯಾರಿಗೂ ನಿಮ್ಮ ಗೋಜಿಗೆ ಬರುವ ಸಾಹಸ ಇರುವುದಿಲ್ಲ. ನಿಶ್ಚಯ ಬುದ್ಧಿಯ ಅರ್ಥವೇ ಏನಾಗಿದೆಯೆಂದರೆ ವಿಜಯಶಾಲಿ ಆಗುವುದು. ಒಂದುವೇಳೆ ಏನಾದರೂ ಲೆಕ್ಕಾಚಾರವು ಬಂದರೆ, ಮನಸ್ಸನ್ನು ಅಸ್ಥಿರ ಮಾಡಿಕೊಳ್ಳಬೇಡಿರಿ. ಸ್ಥಿತಿಯನ್ನು ಏರುಪೇರು ಮಾಡಿಕೊಳ್ಳಬೇಡಿರಿ. ಏನು ಬರುತ್ತದೆಯೋ ಅದನ್ನು ತಕ್ಷಣವೇ ದೂರದಿಂದಲೇ ವಿನಾಶ ಮಾಡಿಬಿಡಿ. ಈಗ ಯೋಧರಾಗಬೇಡಿರಿ. ಅನೇಕರು ಇನ್ನೂ ನಿರಂತರ

ಯೋಗಿ ಆಗಿಲ್ಲ. ಸ್ವಲ್ಪ ಸಮಯ ಯೋಗಿಯಾಗಿರುತ್ತಾರೆ ಹಾಗೂ ಸ್ವಲ್ಪ ಸಮಯ ಯುದ್ಧ ಮಾಡುವ ಯೋಧರಾಗಿರುತ್ತಾರೆ. ನೀವು ನಿಮ್ಮನ್ನು ಏನೆಂದು ಹೇಳಿಕೊಳ್ಳುತ್ತೀರಿ? ಯೋಧರೆಂದೋ ಅಥವಾ ಯೋಗಿಯೆಂದೋ? ಹೇಳಿಕೊಳ್ಳುವುದೇನೋ ಸಹಜವಾಗಿ ಎಂದು ಆದ್ದರಿಂದ ಹೊಸಬರು ಯಾರು ಯಾರು ಬಂದಿದ್ದಾರೋ ಅವರಿಗೆ ಬಾಪ್ದಾದಾರವರು ಪುನಃ ಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆಂದು ಅಭಿನಂದನೆ ನೀಡುತ್ತಾರೆ. ಜೊತೆಯಲ್ಲಿ ಏನು ಪರಿಶೀಲನೆ ಮಾಡಿಕೊಳ್ಳಿರೆಂದರೆ ಫೌಂಡೇಷನ್ನು ನಂಬರ್ ಒನ್ ಆಗಿದೆಯೋ ಅಥವಾ ನಂಬರ್ ಟೂ ಆಗಿದೆಯೋ ಎಂದು.

ಜ್ಞಾನ ಯೋಗವು ತುಂಬಾ ಇಷ್ಟವಾಗುತ್ತದೆಯೆಂದು ಅನೇಕರು ಹೇಳುತ್ತಾರೆ. ಆದರೆ ಜ್ಞಾನವನ್ನು ಉಪಯೋಗಿಸಿಕೊಳ್ಳುತ್ತೀರಾ? ಚೆನ್ನಾಗಿದೆ. ಎನ್ನುವುದೇನೋ ಸರಿ. ಆದರೆ ಕರ್ಮದಲ್ಲಿ ತರುತ್ತೀರಾ? ಜ್ಞಾನವೆಂದರೆ ಆತ್ಮ, ಪರಮಾತ್ಮ ನಾಟಕ ಎಂದು ಹೇಳುವುದಲ್ಲ. ಜ್ಞಾನವೆಂದರೆ ಆತ್ಮ, ಪರಮಾತ್ಮ ನಾಟಕ ಎಂದು ಹೇಳುವುದಲ್ಲ. ಜ್ಞಾನದ ಅರ್ಥವು ತಿಳಿವಳಿಕೆ ಆಗಿದೆ. ತಿಳಿವಳಿಕೆಯುಳ್ಳವರು ಎಂತಹ ಸಮಯವಾಗಿದೆಯೋ ಅಂತಹ ತಿಳಿವಳಿಕೆಯಿಂದ ಸದಾ ಸಫಲರಾಗುತ್ತಾರೆ. ಯಾವಾಗಲಾದರೂ ಜೀವನದಲ್ಲಿ ದುಃಖವು ಬಂದರೆ ಏನು ವಿಚಾರ ಮಾಡುತ್ತೀರಿ? ನನಗೆ ಇದು ಏಕೆ ಅರಿವಾಗಲಿಲ್ಲವೋ ಗೊತ್ತಿಲ್ಲ.... ಇದನ್ನೇ ಹೇಳುತ್ತೀರಿ. ಹಾಗಾದರೆ ನೀವು ತಿಳಿವಳಿಕೆಯುಳ್ಳವರಾಗಿದ್ದೀರಾ, ಜ್ಞಾನಿಯಾಗಿದ್ದೀರಾ? ಹೌದು ಅಥವಾ ಇಲ್ಲ ಎಂದು ಹೇಳಿರಿ. ಹೌದು ಎಂದೇನೋ ತುಂಬಾ ಚೆನ್ನಾಗಿ ಹೇಳುತ್ತೀರಿ. ತಿಳಿವಳಿಕೆಯುಳ್ಳವರ ಚಿಹ್ನೆ ಅಥವಾ ಲಕ್ಷಣವು ಎಂದೂ ಮೋಸ ಹೋಗದಿರುವುದಾಗಿದೆ. ಇದು ಜ್ಞಾನಿಯ ಲಕ್ಷಣವಾಗಿದೆ. ಹಾಗೂ ಯೋಗಿಯ ಲಕ್ಷಣವು ಸದಾ ಸ್ವಚ್ಛ ಹಾಗೂ ಸ್ಪಷ್ಟ ಬುದ್ಧಿಯಾಗಿದೆ. ಸ್ವಚ್ಛವೂ ಆಗಿರಬೇಕು ಸ್ಪಷ್ಟವೂ ಆಗಿರಬೇಕು. ಗೊತ್ತಿಲ್ಲ ಗೊತ್ತಿಲ್ಲ ಎಂದು ಯೋಗಿಯು ಎಂದೂ ಹೇಳುವುದಿಲ್ಲ. ಅವರ ಬುದ್ಧಿಯು ಸದಾ ಸ್ಪಷ್ಟವಾಗಿರುತ್ತದೆ. ಹಾಗೂ ಧಾರಣಾ ಸ್ವರೂಪದ ಲಕ್ಷಣವು ಸದಾ ಸ್ವಯಂ ತಾವೂ ಸಹ ಡಬ್ಬಲ್ ಲೈಟ್ ಆಗಿರುವುದು. ಎಷ್ಟೇ ಜವಾಬ್ದಾರಿಯಿದ್ದರೂ ಧಾರಣಾಮೂರ್ತಿಯು ಸದಾ ಡಬ್ಬಲ್ ಲೈಟ್ ಆಗಿರುವವರು. ಮೇಳವೇ ನಡೆಯುತ್ತಿರಲಿ, ಅಥವಾ ಗಲಭೆ ಗೊಂದಲವು ನಡೆಯುತ್ತಿರಲಿ. ಎರಡರಲ್ಲಿಯೂ ಡಬ್ಬಲ್ ಲೈಟ್ ಆಗಿರುತ್ತಾರೆ ಹಾಗೂ ಸೇವಾಧಾರಿಯ ಲಕ್ಷಣವು ಸದಾ ನಿಮಿತ್ತಭಾವ ಹಾಗೂ ನಿರ್ಮಾಣಭಾವ ಆಗಿದೆ. ಆದ್ದರಿಂದ ಈ ಎಲ್ಲಾ ಲಕ್ಷಣಗಳೂ ನನ್ನಲ್ಲಿವೆಯೇ ಎಂದು ನಿಮ್ಮನ್ನು ಪರಿಶೀಲನೆ ಮಾಡಿಕೊಳ್ಳಿರಿ. ಹೇಳುವುದೇನೋ ಎಲ್ಲರೂ ಹೇಳುತ್ತೀರಲ್ಲವೇ - ನಾಲ್ಕೂ ಸಬ್ಜೆಕ್ಟ್ನ ಳ (ವಿಷಯ) ಈಶ್ವರೀಯ ವಿದ್ಯಾರ್ಥಿ ಆಗಿದ್ದೇವೆ ಎಂದು. ಆದ್ದರಿಂದ ಲಕ್ಷಣಗಳು ಕಂಡುಬರಬೇಕು.

ಹಾಗಾದರೆ ಹೊಸ ಹೊಸಬರು ಏನು ಮಾಡುವಿರಿ? ನಿಮ್ಮ ನಿಶ್ಚಯವನ್ನು ಇನ್ನೂ ಸುಭದ್ರ ಮಾಡಿಕೊಳ್ಳಿರಿ. ಇಲ್ಲದಿದ್ದರೆ ಏನಾಗುತ್ತದೆಯೆಂದರೆ ಎರಡು ವರ್ಷಗಳವರೆಗೆ ನಡೆಯುತ್ತೀರಿ, ಮೂರು ವರ್ಷಗಳವರೆಗೆ ನಡೆಯುತ್ತೀರಿ. ಆಮೇಲೆ ವಾಪಸ್ಸು ಹಳೆಯ ಪ್ರಪಂಚದಲ್ಲಿ ಹೋಗಿಬಿಡುತ್ತೀರಿ. ಹಾಗೂ ಆಮೇಲೆ ಯಾರು ವಾಪಸ್ಸು ಹೋಗಿ ಬಿಡುತ್ತಾರೋ ಅವರು ಆ ಪ್ರಪಂಚದಲ್ಲಿಯೂ ಸೆಟ್ ಆಗಲು (ಹೊಂದಿಕೊಳ್ಳಲು) ಸಾಧ್ಯವಾಗುವುದಿಲ್ಲ. ಆ ಪ್ರಪಂಚದವರಾಗಿಯೂ ಇರುವುದಿಲ್ಲ. ಈ ಪ್ರಪಂಚದವರಾಗಿಯೂ ಇರುವುದಿಲ್ಲ. ಆದ್ದರಿಂದ ನಿಮ್ಮ (ಫೌಂಡೇಷನ್ನನ್ನು ತುಂಬಾ ಪಕ್ಕಾ ಮಾಡಿಕೊಳ್ಳಿರಿ. ಸರ್ವಶಕ್ತಿವಂತರಾದ ತಂದೆಯು ಜೊತೆಯಲ್ಲಿದ್ದಾರೆ ಎನ್ನುವ ಅನುಭವ ಮಾಡಿರಿ. ಈ ಒಂದು ಅನುಭವವನ್ನು ಮಾಡಿದರೂ ಸಾಕು ಎಲ್ಲದರಲ್ಲಿಯೂ ಪಾಸಾಗಿ (ತೇರ್ಗಡೆಯಾಗಿ) ಬಿಡುವಿರಿ. ಪ್ರಾಪಂಚಿಕ ಪ್ರಧಾನ ಮಂತ್ರಿಯಿದ್ದಾರೆ, ಮಂತ್ರಿಗಳಿದ್ದಾರೆ. ಅವರ ಜೊತೆಯದೂ ನಶೆಯಿರುತ್ತದೆ. ಇವರಂತೂ ಸರ್ವಶಕ್ತಿವಂತರಾಗಿದ್ದಾರೆ. ಒಳ್ಳೆಯದು.

ಒಳ್ಳೆಯದು. ನಾಲ್ಕೂ ಕಡೆಯ ಸದಾ ಶ್ರೇಷ್ಠ ಭಾಗ್ಯವಂತರು ಭಾಗ್ಯವಿಧಾತನನ್ನು ನಿಮ್ಮವರನ್ನಾಗಿ ಮಾಡಿಕೊಳ್ಳುವ ಶ್ರೇಷ್ಠ ಆತ್ಮರಿಗೆ ಸದಾ ಬಾಪ್ದಾದಾರವರ ಶ್ರೀಮತವನ್ನು ಕೇಳಿದ ಕೂಡಲೇ ಕಾರ್ಯಗತ ಮಾಡುವ ಸರ್ವ ಸಪುತ್ರ ಮಕ್ಕಳಿಗೆ, ಸದಾ ಸೇವೆಯಲ್ಲಿ ಅಚಲವಾಗಿರುವ ಗೊಂದಲದಿಂದ ಮುಕ್ತರಾದ ಹಾಗೂ ಪರಮಾತ್ಮ ಮಿಲನದ ಮೇಳವನ್ನು ಮಾಡುವ ಎಲ್ಲಾ ಮಕ್ಕಳಿಗೂ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

ಒಳ್ಳೆಯದು. ಡಬಲ್ ವಿದೇಶೀಯರಿಗೆ ಡಬಲ್ ನಶೆಯಿದೆಯಲ್ಲವೇ? ಡಬಲ್ ವಿದೇಶಿ ಅರ್ಥಾತ್ ಡಬ್ಬಲ್ ಲೈಟ್, ಡಬಲ್ ನಶೆ ಹಾಗೂ ಡಬ್ಬಲ್ ಬಾಪ್ದಾದಾರವರ ಹಾಗೂ ಪರಿವಾರದವರ ಪ್ರಿಯರು. ತಿಳಿಯಿತೇ?

ವರದಾನ: ವರದಾನ: ತಮ್ಮತನದ ಅಧಿಕಾರದ ಅನುಭೂತಿಯ ಮೂಲಕ ಅಧೀನತೆಯನ್ನು ಸಮಾಪ್ತಿ ಮಾಡುವಂತಹ ಸರ್ವ ಅಧಿಕಾರಿ ಭವ.

ತಂದೆಯನ್ನು ತನ್ನವರನ್ನಾಗಿ ಮಾಡಿಕೊಳ್ಳುವುದು ಅರ್ಥಾತ್ ತಮ್ಮ ಅಧಿಕಾರ ಅನುಭವವಾಗುವುದು. ಎಲ್ಲಿ ಅಧಿಕಾರವಿದೆ ಅಲ್ಲಿ, ಇಲ್ಲಾ ಸ್ವಯಂನ ಪ್ರತಿ ಅಧೀನತೆ ಇದೆ, ಇಲ್ಲಾ ಸಂಬಂಧ-ಸಂಪರ್ಕದಲ್ಲಿ ಬರುವ ಅಧೀನತೆ ಇದೆ, ಇಲ್ಲ ಪ್ರಕೃತಿ ಮತ್ತು ಪರಿಸ್ಥಿತಿಗಳಿಂದ ಬರುವ ಅಧೀನತೆ ಇದೆ. ಯಾವಾಗ ಈ ಎಲ್ಲಾ ಪ್ರಕಾರದ ಅಧೀನತೆ ಸಮಾಪ್ತಿಯಾಗಿ ಬಿಡುವುದು, ಆಗ ಸರ್ವ ಅಧಿಕಾರಿಗಳಾಗಿ ಬಿಡುವಿರಿ. ಯಾರೇ ಆದರೂ ಸಹ ತಂದೆಯನ್ನು ತಿಳಿದುಕೊಂಡು ಮತ್ತು ತನ್ನವರನ್ನಾಗಿ ಮಾಡಿಕೊಳ್ಳುವರೊ ಅವರೇ ಮಹಾನ್ ಆಗಿದ್ದಾರೆ ಮತ್ತು

ಅಧಿಕಾರಿಯಾಗಿದ್ದಾರೆ.

ಸ್ಲೋಗನ್: ಸ್ಲೋಗನ್: ತಮ್ಮ ಸಂಸ್ಕಾರ ಹಾಗೂ ಗುಣಗಳನ್ನು ಸರ್ವರ ಜೊತೆ ಸೇರಿ ನಡೆಯಬೇಕು - ಇದೇ ವಿಶೇಷ ಆತ್ಮಗಳ ವಿಶೇಷತೆಯಾಗಿದೆ.